ಎಂ.ಎ. ಕುಮಾರ್, ಬೆಂಗಳೂರು

*ಜೀವನದಲ್ಲಿ ಅತಿ ಹೆಚ್ಚು ಕಾಯುವ ಸ್ಥಳ ಯಾವುದು?*



ಬೋಡುತಲೆ.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ

*ಸಿಂಹದ ಗರ್ಜನೆಗಿಂತ ಹೆಣ್ಣಿನ ಪಿಸುಮಾತು ಬಹಳ ಸದ್ದಾಗುತ್ತ ಂತೆ. ಏಕೆ?*

ಫ್ರೀಕ್ವೆನ್ಸಿ ಜಾಸ್ತಿಯಾದುದರಿಂದ!

ಸಂಗೀತ್ ಜೆ.ಎಸ್. ಹಡಗಲಿ

*ಉತ್ತರದಂತೆ ರಾಮ್ ಬದುಕೋ, ಬದುಕಿದಂತೆ ರಾಮ್ ಉತ್ತರವೋ?*

ಕರುನಾಡ ಪ್ರಜೆಯಾದ್ದರಿಂದ ದಕ್ಷಿಣದಂತೆ ಬದುಕು.

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ

*ಸಚಿವರಾಗಲು ಏನು ಅರ್ಹತೆ ಇರಬೇಕು?*

ಓಟು, ಸೀಟು ಕೊಳ್ಳಲು ನೋಟು ಇದ್ದರೆ ಸಾಕು.

ಆರ್. ನಾಗರಾಜ್, ಗೊರೂರು

*ಆಫೀಸಿನಲ್ಲಿ ನೀತಿ ಸಂಹಿತೆ, ಮನೆಯಲ್ಲಿ ಪ್ರೀತಿ ಸಂಹಿತೆ ಜಾರಿಯಾಗಿದೆ. ನನ್ನ ಪಾಡು?*




ಓಹೋ! ನೀವು ಜಾರಿ ಆಗಿದೆ. ಅದಕ್ಕೇ ಇದು ಜಾರಿಯಾಗಿದೆ. ನೆಟ್ಟಗಾಗುವವರೆಗೆ ಭೀತಿಸಂಹಿತೆಯೇ ಗಟ್ಟಿ.

ಕೆ. ಹೊನ್ನಪ್ಪ, ಕ್ಯಾತ್ಸಂದ್ರ

*'ನಿ' ಮತ್ತು 'ನ' ಅಕ್ಷರದೊಂದಿಗೆ ಕೊನೆಯಾಗುವ ಎರಡು ಪದಗಳನ್ನು ತಿಳಿಸಿ, ವ್ಯತ್ಯಾಸ ಹೇಳಿ?*

ಜನನಿ, ಜನನ; ಕಾಯಿದೆ ರೀತ್ಯಾ ಕನಿಷ್ಠ ವ್ಯತ್ಯಾಸ 18 ವರ್ಷ, 9 ತಿಂಗಳು.

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು

*ಬೆಂಕಿಗೆ ಚಳಿಯಾಗುವುದು ಯಾವಾಗ?*

ನೀರು ಎರಚಿದಾಗ; ಚಳಿ ತಡೆಯಲಾರದೆ ಕೆಂಡದೊಳಗೆ ಸೇರಿಕೊಂಡು ಬೂದಿ ಹೊದ್ದು ಮಲಗಿಬಿಡುತ್ತದೆ.

ರತ್ನಜ, ಮೈಸೂರು

*ನ್ಯಾಯಾಲಯಗಳ ಕಟ್ಟಡಗಳಿಗೆಲ್ಲ ಕೆಂಪುಬಣ್ಣವನ್ನು ಬಳಿಯುತ್ತಿರುವುದೇಕೆ ರಾಂಜೀ?*

ನ್ಯಾಯಾಧೀಶರ ಸಂಖ್ಯೆ ಕಡಿಮೆ ಇರುವುದರಿಂದ ಕೇಸುಗಳಿಗೆ ಸ್ಟಾಪ್ ಸಿಗ್ನಲ್ ಸೂಚಿಸಲು!

ಜಯದೇವ ಹಲಕಿ, ಗೋಕಾಕ

*ನಮ್ಮ ಸಚಿವರೊಬ್ಬರಿಗೆ ಜನ 'ಮಾಸ್ಟರ್ ಮೈಂಡ್' ಎಂದು ಬಿರುದು ನೀಡಿದ್ದಾರಲ್ಲಾ...?*

ಅದು **master mind** ಅಲ್ಲ,; **mass stir mind** – ಜನರಲ್ಲಿ ಗೊಂದಲ ಎಬ್ಬಿಸುವ ಬುದ್ಧಿ ಎಂದರ್ಥ; ಬಿರುದಲ್ಲ, ಟೀಕೆ.

ಅರುಣ್ ಕುಲಕರ್ಣಿ, ಗದಗ

*ಗಾಯಕ/ಗಾಯಕಿಯರು ಹಾಡುವಾಗ ಕಣ್ಣು, ಕಿವಿ ಮುಚ್ಚಿಕೊಳ್ಳುವುದೇಕೆ?*

ಪ್ರೇಕ್ಷಕರ ದಿಟ್ಟ ಅಭಿಪ್ರಾಯವನ್ನು ಎದುರಿಸಲಾಗದೆ; ತಮ್ಮ ಹಾಡನ್ನು ತಾವೇ ಕೇಳಲಾಗದೆ.

ಪಿ.ಜೆ. ರಾಘವೇಂದ್ರ, ಮೈಸೂರು

*ನ್ಯಾಯದೇವತೆಯ ಕೈಯಲ್ಲಿ ತಕ್ಕಡಿ ಇರುವಾಗ ನ್ಯಾಯಮೂರ್ತಿಗಳ ಕೈಯಲ್ಲಿ ಸುತ್ತಿಗೆ ಏಕೆ?*

ಕಣ್ಣಿಗೆ ಬಟ್ಟೆ ಕಟ್ಟಿರುವುದರಿಂದ ಸದ್ದು ಕೇಳಿ ನ್ಯಾಯದ ಬೊಟ್ಟನ್ನು ತಟ್ಟೆಯಲ್ಲಿ ಹಾಕಲು.

ಆರ್. ಮಧುಸೂದನ್, ಹಾಸನ

*ಸಿನೆಮಾ ನಟ- ನಟಿಯರನ್ನು ಸ್ಟಾರ್‌ಗೆ ಹೋಲಿಸುತ್ತಾರೆ; ಮೂನ್‌ಗೆ ಏಕೆ ಹೋಲಿಸುವುದಿಲ್ಲ?*

ಚಂದ್ರನಂತೆ ದಿನಕ್ಕೊಂದು ಆಕಾರವಿರದೆ ಒಂದೇ ಶೇಪ್ ಮೇಯ್ನ್‌ಟೇಯ್ನ್ ಮಾಡಿಕೊಳ್ಳುವುದರಿಂದ.

ಆರತಿ ಘಟಿಕಾರ್, ದುಬೈ

*ರಕ್ತದಾನ, ನೇತ್ರದಾನಗಳನ್ನು ಮಾಡುವಂತೆ ಅಧಿಕವಾದ ಬೊಜ್ಜು ದಾನ ಮಾಡುವಂತಿದ್ದರೆ ಹೇಗಿರುತ್ತಿತ್ತು ರಾಮ್?*

ಜಿಮ್, ಯೋಗ ಕೇಂದ್ರಗಳ ಜಾಗದಲ್ಲಿ ಫ್ಯಾಟ್ ಕಲೆಕ್ಷನ್ & ಡಿಸ್ಟ್ರಿಬ್ಯೂಶನ್ ಏಜೆನ್ಸಿಗಳು ತಲೆಯೆತ್ತುತ್ತಿದ್ದವು.

## ಬಹುಮಾನಿತ ಪ್ರಶ್ನೆ

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ

*ಮನಸ್ಸನ್ನು ಶಾಂತವಾಗಿಡುವ ಇಬ್ಬರು 'ಕಿಂಗ್'ಗಳು ಯಾರು?*

ವಾಕಿಂಗ್, ಜೋಕಿಂಗ್.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ಕೈ ಪಕ್ಷದ ಹಸು- ಕರುಗಳು ಈಗ ಏನು ಮಾಡುತ್ತಿವೆ ರಾಂಜೀ?*

ಹಸು ವಯಸ್ಸಾಗಿ ಮೆತ್ತಗಾಗಿದೆ. ಕರು ಇನ್ನೂ ಎಳಸೆಳಸಾಗೇ ಆಡಿಕೊಂಡಿದೆ.

ಎಚ್.ಆರ್. ಕಡಿವಾಲ, ಬಾದಾಮಿ

*ಇಂದು ನಾಮಫಲಕದಲ್ಲಿ ಕನ್ನಡ ದೋಷ ಬಹಳಾಗಿ ಕಂಡು ಬರುತ್ತಿದೆಯಲ್ಲ?*

ಹೆಸರೇ ನಾಮಫಲಕವಲ್ಲವೇ! ಭಾಷೆಗೇ ನಾಮ!

ಎಂ.ವಿ. ವೆಂಕಮ್ಮ, ಬಳ್ಳಾರಿ

*ಪಕ್ಷ ಗರ್ಭಗುಡಿಯಿದ್ದಂತೆ. ಕಾರ್ಯಕರ್ತರು?*

ಚರ್ಪಿಗಾಗಿ ಕಾಯುವ ಭಕ್ತರು.

ಪೂರ್ಣಿಮಾ ಹೆಜ್ಮಾಡಿ, ಸಾಂಗ್ಲಿ

*ದೇವರ ಮೇಲೆ ನಂಬಿಕೆ ಇಡಬೇಕೋ, ಭಕ್ತಿ ಇಡಬೇಕೋ?*



ಮೇಲೆ ಅಲ್ಲವೆ? ಹೂ ಇಟ್ಟರೆ ಸಾಕು.

ಎಚ್.ಎಸ್. ರಾಘವೇಂದ್ರ, ಬೆಂಗಳೂರು

*ಆಸ್ಪತ್ರೆಗಳು ಹೆಚ್ಚಾದಷ್ಟೂ ರೋಗಿಗಳು ಹೆಚ್ಚಾಗುತ್ತಿರಲು ಕಾರಣವೇನು?*

ರೋಗಿಯೊಡನೆ ಹೋದವರಿಗೂ ತುಂಬಾ ಕಾಯುವ ಸಮಯದಲ್ಲಿ ಇತರ ರೋಗಿಗಳ ವತಿಯಿಂದ ಇಂಫೆಕ್ಷನ್ ಆಗುವುದರಿಂದ.

ಪ್ರೊ.ಮಧೂರು ಮೋಹನ ಕಲ್ಲೂರಾಯ, ಗೇರುಕಟ್ಟೆ

*ಇಲ್ಲೊಬ್ಬರು ಸಾಲ ತೆಗೆದುಕೊಂಡವರು 'ನಾನು ಸಾಯಲು ನೀನೇ ಕಾರಣ' ಎಂದು ಬರೆದು ಸಾಯುತ್ತೇನೆ ಎಂದು ಬ್ಲ್ಯಾಕ್‌ಮೇಲ್ ಮಾಡ್ತಿದ್ದಾರಲ್ಲಾ...?*

'ನಿನ್ನ ಇತರ ರೌಡಿ ಸಾಲಗಾರರ ಬಳಿ ನೀನು ನನ್ನ ಸಾಲ ಕೊಟ್ಟುಬಿಟ್ಟೆ ಎಂದು ಹೇಳಿಬಿಡುತ್ತೇನೆ' ಎನ್ನಿ. ನಿಮ್ಮ ಹಣ ಬಂದುಬಿಡುತ್ತದೆ!

■ ರಾಮ್